ಹಾಸನ ಜಿಲ್ಲೆಯಲ್ಲಿ ಹೊಸ ಬಡಾವಣೆಗಳ ಅಭಿವೃದ್ಧಿ

1518 (1532) ಶ್ರೀ ಪುಟ್ಟರಂಗನಾಥ ಎಸ್.ಹೆಚ್ (ಬೇಲೂರು): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಹಾಸನ ಜಿಲ್ಲೆಯಲ್ಲಿ ಹೊಸ ಬಡಾವಣೆಗಳ ಅಭಿವೃದ್ಧಿಪಡಿಸಲು ರಾಜೀವ್ ಗಾಂಧಿ ವಸತಿ ನಿಗಮದ ವತಿಯಿಂದ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ; (ತಾಲ್ಲೂಕುವಾರು ವಿವರ ನೀಡುವುದು)?

ಶ್ರೀ ಸಿ.ಆರ್. ಸಗೀರ್ ಅಹಮದ್ (ವಸತಿ ಸಚಿವರು)

ಅ. ಹಾಸನ ಜಿಲ್ಲೆಯಲ್ಲಿ ಹೊಸ ಆಶ್ರಯ ಬಡಾವಣೆಗಳಿಗೆ ಮೂಲಭೂತ ಸೌಲಭ್ಯಗಳನ್ನು ನೀಡಲು ನಿಗಮವು ಈ ಕೆಳಗಿನ ಅನುದಾನವನ್ನು ಬಿಡುಗಡೆ ಮಾಡಿದೆ:

ಜಿಲ್ಲೆ	ತಾಲ್ಲೂಕು	ಪಟ್ಟಣ	ಬಡಾವಣೆಯ ಹೆಸರು	ಬಿಡುಗಡೆ ಮಾಡಿದ ಅನುದಾನ (ರೂ. ಲಕ್ಷಗಳಲ್ಲಿ)	ಉದ್ದೇಶ
	ಹಾಸನ	ಹಾಸನ	ತಟ್ಟೆಕೆರೆ ಬಡಾವಣೆಯಲ್ಲಿರುವ ಎಸ್.ಎಮ್. ಕೃಷ್ಣ ನಗರ ಮತ್ತು ಹೆಚ್.ಡಿ. ದೇವೇಗೌಡ ನಗರ	22.00	ವಿದ್ಯುಚ್ಛಕ್ತಿ ಪೂರೈಕೆ
ಹಾಸನ	ಬೇಲೂರು	ಬೇಲೂರು	ಹೊಸನಗರ ಮತ್ತು ಹಂಡಿಚಿಕ್ಕಾರ ಬಡಾವಣೆಗಳು	7.75	ವಿದ್ಯುಚ್ಛಕ್ತಿ ಪೂರೈಕೆ
		ಒಟ್ಟು		29.75	

ರಾಜ್ಯದಲ್ಲಿ ವಯಸ್ಕರ ಶಿಕ್ಷಣ ಕಾರ್ಯಕ್ರಮ

1520 (2000) ಶ್ರೀ ಪುಟ್ಟರಂಗನಾಥ ಎಸ್.ಹೆಚ್ (ಬೇಲೂರು): ಮಾನ್ಯ ವಯಸ್ಕರ ಶಿಕ್ಷಣ ಗ್ರಂಥಾಲಯ, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯು ಸಾಕ್ಷರತೆ ಬಗ್ಗೆ ಕಾರ್ಯಕ್ರಮ ನಡೆಸುತ್ತಿದೆಯೇ; ಹಾಗಿದ್ದಲ್ಲಿ ಎಲ್ಲಿ ನಡೆಸುತ್ತಿದೆ.

ಆ. ವಿದ್ಯಾಪೀಠಗಳು ಯಾವ ರೀತಿಯ ಕಾರ್ಯಕ್ರಮ ಹಮ್ಮಿಕೊಂಡಿವೆ.

ಇ. ವಿದ್ಯಾಪೀಠಗಳಲ್ಲಿ ಎಷ್ಟು ಜನ ನೌಕರರು ಕೆಲಸ ಮಾಡುತ್ತಿದ್ದಾರೆ. (ಪ್ರತಿಯೊಂದು ವಿದ್ಯಾಪೀಠದ ವಿವರ ನೀಡುವುದು)

ಈ. ವಯಸ್ಕರ ಶಿಕ್ಷಣ ಸಮಿತಿಗೆ ವಾರ್ಷಿಕ ಅನುದಾನ ಎಷ್ಟು ಬಿಡುಗಡೆ ಮಾಡಲಾಗುತ್ತಿದೆ? (ಆದಾಯ ಮತ್ತು ಖರ್ಚು ವಿವರ ನೀಡುವುದು)

ಶ್ರೀ ಬಾಬುರಾವ್ ಚಿವ್ವಾಣ (ವಯಸ್ಕರ ಶಿಕ್ಷಣ, ಗ್ರಂಥಾಲಯ, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು)

ಅ. ದಿನಾಂಕ: 2.11.2001ರ ಆದೇಶ ಸಂಖ್ಯೆ:ಇಡಿ 3 ಇಎಸ್‌ಡಬ್ಲ್ಯೂ 2001ರನ್ವಯ ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿಯನ್ನು ವಿಸರ್ಜನೆಗೊಳಿಸಲಾಗಿದೆ. ಆದರ ಯೋಜನಾ ಕಾರ್ಯಕ್ರಮಗಳನ್ನು ಹಾಗೂ ವಿದ್ಯಾಪೀಠಗಳನ್ನು ಸಮಿತಿಯ ಆಸ್ತಿಯೊಂದಿಗೆ ಲೋಕ ಶಿಕ್ಷಣ ಇಲಾಖೆಗೆ ವರ್ಗಾಯಿಸಲಾಗಿದೆ.

ಆ. ಗ್ರಾಮಾಂತರ ಪ್ರದೇಶದ 18 ರಿಂದ 25ರ ವಯೋಮಿತಿಯ ಯುವಕ, ಯುವತಿಯರಿಗೆ ಹೊಲಿಗೆ, ನಿಟ್ಟಿಂಗ್ ಮತ್ತು ಎಂಬ್ರಾಯಿಡರಿ, ವಿದ್ಯುತ್ ವೈರಿಂಗ್ ಮತ್ತು ವಿದ್ಯುತ್ ಉಪಕರಣಗಳ ರಿಪೇರಿ, ಬೇಸಿಕ್ ಎಲೆಕ್ಟ್ರಾನಿಕ್ಸ್ ಮತ್ತು ಟಿ.ವಿ. ದುರಸ್ಥಿ, ಮತ್ತಿತರ ವೃತ್ತಿಯಲ್ಲಿ ತರಬೇತಿಯನ್ನು 6 ತಿಂಗಳ ಕಾಲ ನೀಡಲಾಗುತ್ತಿದೆ.

ಇ. ವಿದ್ಯಾಪೀಠಗಳಲ್ಲಿ ಕೆಲಸ ಮಾಡುತ್ತಿರುವ ನೌಕರರ ಒಟ್ಟು ಸಂಖ್ಯೆ:139. ವಿವರ ಈ ಕೆಳಕಂಡಂತಿದೆ:

ಕ್ರಮ ಸಂಖ್ಯೆ	ವಿದ್ಯಾಪೀಠ	ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿ
1	ನಂಜನಗೂಡು, ಮೈಸೂರು ಜಿಲ್ಲೆ	14
2	ಕೆಂಗೇರಿ ವಿದ್ಯಾಪೀಠ, ಬೆಂಗಳೂರು ಜಿಲ್ಲೆ	10
3	ಏನಿಗದೆಲೆ ವಿದ್ಯಾಪೀಠ, ಕೋಲಾರಜಿಲ್ಲೆ	18
4	ಕಾತ್ರಾಳ್ ವಿದ್ಯಾಪೀಠ, ಚಿತ್ರದುರ್ಗಜಿಲ್ಲೆ,	10
5	ಶಿವಗಂಗಾ ವಿದ್ಯಾಪೀಠ, ತುಮಕೂರು ಜಿಲ್ಲೆ	10
6	ಶಿವಾರಗುಡ್ಡ ವಿದ್ಯಾಪೀಠ, ಮಂಡ್ಯಜಿಲ್ಲೆ	12
7	ಕಾವೇರಿ ವಿದ್ಯಾಪೀಠ, ಮಂಡ್ಯ ಜಿಲ್ಲೆ	13
8	ತುಂಗಾ ವಿದ್ಯಾಪೀಠ, ಶಿವಮೊಗ್ಗ ಜಿಲ್ಲೆ	18
9	ಯಗಚಿ ವಿದ್ಯಾಪೀಠ, ಹಾಸನ ಜಿಲ್ಲೆ	12
10	ಹೊಯ್ಸಳ ವಿದ್ಯಾಪೀಠ, ಚಿಕ್ಕಮಗಳೂರು ಜಿಲ್ಲೆ	07
11	ನವಿಲಗಿರಿ ವಿದ್ಯಾಪೀಠ, ಉತ್ತರಕನ್ನಡಜಿಲ್ಲೆ	08
12	ಚಾರಾ ವಿದ್ಯಾಪೀಠ, ಉಡುಪಿ ಜಿಲ್ಲೆ	04
13	ವರದಾ ವಿದ್ಯಾಪೀಠ, ಹಾವೇರಿ ಜಿಲ್ಲೆ	08
14	ಪಂಪಾ ವಿದ್ಯಾಪೀಠ, ಬಳ್ಳಾರಿ ಜಿಲ್ಲೆ	06
15	ಬಂಥನಾಳ ವಿದ್ಯಾಪೀಠ, ಬಿಜಾಪುರ ಜಿಲ್ಲೆ	14
16	ಬಸವಕಲ್ಯಾಣ ವಿದ್ಯಾಪೀಠ, ಬೀದರ್‌ಜಿಲ್ಲೆ	05
	ಒಟ್ಟು	139

ಈ. ವಿಸರ್ಜಿತ ವಯಸ್ಕರ ಶಿಕ್ಷಣ ಸಮಿತಿಯ ಚಟುವಟಿಕೆಗಳನ್ನು ನಿರ್ವಹಿಸಲು ಲೋಕ ಶಿಕ್ಷಣ ಇಲಾಖೆಗೆ ಲೆಕ್ಕ ಶೀರ್ಷಿಕೆ "2202--04-001-0-01 (ಯೋಜನೆ)" ರಡಿಯಲ್ಲಿ 2002-03ನೇ

ಆರ್ಥಿಕ ವರ್ಷದ ಆಯವ್ಯಯದಲ್ಲಿ ಈ ಕೆಳಕಂಡಂತೆ ಅನುದಾನವನ್ನು ಒದಗಿಸಲಾಗಿದೆ:

ಯೋಜನೇತರ - ರೂ.193.32 ಲಕ್ಷ

ಯೋಜನೆ - ರೂ. 44.00 ಲಕ್ಷ

2001-02ರ ಆದಾಯ ಮತ್ತು ಖರ್ಚು:-

ಆದಾಯ - ರೂ. 11,02,237.00

ಖರ್ಚು - ರೂ. 5,45,795.00

ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಆಡಳಿತ ಮಂಡಳಿ ಶಾಲೆಗಳಿಗೆ ಅನುದಾನ ನೀತಿ ಸಂಹಿತೆ

1524 (1551) ಶ್ರೀ ಎಸ್.ಎ. ರವೀಂದ್ರನಾಥ್ (ಮಾಯಕೊಂಡ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಆಡಳಿತ ಮಂಡಳಿಯ ಶಾಲೆ ಕಾಲೇಜುಗಳಿಗೆ ಸರ್ಕಾರ ಅನುದಾನ ನೀಡಲು ನಿರ್ಧರಿಸಿದೆಯೇ?

ಆ. ಹಾಗಿದ್ದಲ್ಲಿ ಯಾವಾಗಿನಿಂದ ಈ ನಿಯಮ ಜಾರಿಗೆ ಬರುತ್ತದೆ. ಇದಕ್ಕೆ ಅನುಸರಿಸುವ ಮಾನದಂಡಗಳೇನು?

ಇ. ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು?

ಈ. ಇದರ ಜೊತೆಯಲ್ಲಿ ಇತರರು ನಡೆಸುವ ಶಾಲಾ ಕಾಲೇಜುಗಳಿಗೆ ಅನುದಾನ ನೀಡುವ ಪ್ರಸ್ತಾಪ ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಪ್ರೋ. ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ರಾಜ್ಯ ಸಚಿವರು)

ಅ. ದಿನಾಂಕ: 1.6.1987ರಿಂದ 31.3.1992ರ ಅವಧಿಯಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಆಡಳಿತ ಮಂಡಳಿಗಳು ಪ್ರಾರಂಭಿಸಿದ ಹಾಗೂ ಸತತವಾಗಿ ನಡೆಸುತ್ತಿರುವ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಿಗೆ ಮಾತ್ರ ಅನುದಾನ ನೀಡಲು ನಿರ್ಧರಿಸಿದೆ.

ಆ. ದಿನಾಂಕ 13.9.2002ರ ಆದೇಶ ಸಂಖ್ಯೆ: ಇಡಿ 65 ವಿವಿಧ 97 ರನ್ವಯ ಜಾರಿಗೊಳಿಸಲಾಗಿದೆ. ಮಾನದಂಡಗಳನ್ನು ಸದರಿ ಆದೇಶದಲ್ಲಿ ನಿಗಧಿ ಪಡಿಸಲಾಗಿದೆ.

ಇ. ಪ್ರಶ್ನೆ ಉದ್ಭವಿಸುವುದಿಲ್ಲ

ಈ. ಇಲ್ಲ

ಆಶ್ರಯ ಮನೆಗಳ ಹಂಚಿಕೆಯಲ್ಲಿ ಬೀದರ್ ಜಿಲ್ಲೆಯನ್ನು ಕಡೆಗಣಿಸಿರುವುದು

1521 (1572) ಶ್ರೀ ರಾಜೇಂದ್ರವರ್ಮ (ಹುಲ್‌ಸೂರ್): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಕಳೆದ 3 ವರ್ಷಗಳಲ್ಲಿ (ದಿನಾಂಕ 31.1.2003 ರವರೆಗೆ) ರಾಜ್ಯದ ವಿವಿಧ ಜಿಲ್ಲೆಗಳಿಗೆ ಪ್ರತಿವರ್ಷ ಆಶ್ರಯ ಹಾಗೂ ಇತರ ಯೋಜನೆಗಳ ಅಡಿಯಲ್ಲಿ ಹಂಚಿಕೆ ಮಾಡಲಾದ ಮನೆಗಳ ಸಂಖ್ಯೆ ಎಷ್ಟು;

ಆ. ಮೇಲ್ಕಂಡ ಅವಧಿಯಲ್ಲಿ ಸದರಿ ಯೋಜನೆಗಳ ಅನುಷ್ಠಾನಕ್ಕಾಗಿ ಪ್ರತಿ ವರ್ಷ ಪ್ರತಿ ಜಿಲ್ಲೆಗೆ ನೀಡಲಾದ ಹಣದ ಮೊತ್ತವೆಷ್ಟು;